ಭಾರತೀ ಗಂಗಾಧರ್, ಬೆಂಗಳೂರು
ವಿವಾಹ ಸಂದರ್ಭದಲ್ಲಿ 'ಕನ್ಯಾದಾನ' ಎನ್ನುವರಲ್ಲ, ಇದು ಎಷ್ಟರಮಟ್ಟಿಗೆ ಸರಿ?




ಬಾಡಿಗೆ, ಭೋಗ್ಯ, ಖರೀದಿಗೆ ನೀಡದಿರುವುದರಿಂದ ಇದ್ದುದರಲ್ಲಿ ಇದೇ ಸೂಕ್ತ.

ವಿ. ಹೇಮಂತಕುಮಾರ್, ಬೆಂಗಳೂರು
'ನೀನಿಲ್ಲದೆ ನಾನು ನೀರಿನಿಂದ ಹೊರಬಂದ ಮೀನು' ಎಂಬ ಸಂದೇಶ ಕಳುಹಿಸಿದ್ದಾಳಲ್ಲ?
ಚಿಂತೆ ಬೇಡ. ಅವಳ ಹೆಸರು ಮೀನಾಕ್ಷಿ; ಸ್ವಿಮಿಂಗ್ ಪೂಲಲ್ಲಿ ಇನ್‌ಸ್ಪೆಕ್ಟರ್.

ಕೆ.ಎಂ. ವಿಭೂತಿ, ಹರಿಹರ
ಕೈ ಹಿಡಿದವಳೇ ಗಂಡನಿಗೆ ಬಿಸಿ ತುಪ್ಪವಾದರೆ ಬದುಕು ಸಾಧ್ಯವೆ?
ಅದಕ್ಕೊಂದಷ್ಟು ತಾಳ್ಮೆಯ ಕಡಲೆಹಿಟ್ಟು, ಮಾತಿನ ಸಕ್ಕರೆಸಿಹಿ ಬೆರೆಸಿ ಬದುಕನ್ನು ಮೈಸೂರುಪಾಕ ಮಾಡಿಕೊಳ್ಳಿ.

ಎಂ.ಎ. ಕುಮಾರ್, ಬೆಂಗಳೂರು
ತಾತಂದಿರೇ ಹೆಚ್ಚು ಕೆಮ್ಮುವುದೇಕೆ?



ಮನೆಯವರ ಗಮನವನ್ನು ಹಾಗೆ ಮಾತ್ರ ಸೆಳೆಯಲು ಸಾಧ್ಯವಂತೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಪ್ರೀತಿ ಬೂದಿ ಮುಚ್ಚಿದ ಕೆಂಡ. ಮದುವೆ?
ದೀರ್ಘಕಾಲ ಬೆಳಗಬೇಕಾದ ನಂದಾದೀಪ.

ಉಷಾಲಕ್ಷ್ಮೀ ಅರವಿಂದ ಹೊಳ್ಳ, ಬೆಂಗಳೂರು
ಕಾಲುಂಗುರ, ಮಾಂಗಲ್ಯ ನೋಡಿ ಹೆಣ್ಣಿಗೆ ಮದುವೆ ಆಗಿದೆ ಎನ್ನುವ ಕಾಲ ಈಗಿಲ್ಲ?
ಆಗಲೂ ಇರಲಿಲ್ಲ. ಶಕುಂತಳೆಗೆ ದುಷ್ಯಂತ ಕೊಟ್ಟಿದ್ದು ಸಿಂಗಲ್ ರಿಂಗು!

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ಶ್ರಮ ಪಡದ ಹಣದ ಜೊತೆಗೆ ಶನಿಯೂ ಬರ್ತಾನಂತೆ ಹೌದಾ ಸಾರ್?
ತಮ್ಮನ್ನು ರೈಡ್ ಮಾಡಲು ಬಂದವರನ್ನು ಕಾಳಧನಿಗಳು ಹೀಗನ್ನುವರಂತೆ.

ಬೂಕನಕೆರೆ ವಿಜೇಂದ್ರ, ಮೈಸೂರು
ಕೆಲವು ಶ್ರೀಮಂತರೇಕೆ ಭಿಕ್ಷುಕರ ತರಹ ಬದುಕುತ್ತಿದ್ದಾರೆ?
ಸಾಲ ಕೇಳುವ ಮಂದಿಯ, ತೆರಿಗೆ ಅಧಿಕಾರಿಗಳ, ಕಳ್ಳರ ಗಮನ ಸೆಳೆಯದಿರಲು.

ಸಿಹಿಮೊಗೆ ರಮೇಶ್, ಮೈಸೂರು
ಮಠಾಧೀಶರು, ಸ್ವಾಮಿಗಳ ಹೆಸರಿನ ಹಿಂದೆ ಮೂರು ಶ್ರೀಗಳು ಏಕೆ?
ಅವರು ಮಾಮೂಲು ಧನಿಕರಿಗಿಂತ ಮೂರು ಪಟ್ಟು ಶ್ರೀಮಂತರೆಂದು ಸೂಚಿಸಲು.

ಮಹಾವೀರ ಕಾಸರ, ಶಿವಮೊಗ್ಗ
ಬಿಗ್ ಬಾಸ್ ಮನೆಗೆ ಕ್ರಿಮಿನಲ್ ಹಿನ್ನೆಲೆ ಇರುವವರನ್ನು ಕಳಿಸಲು ಕಾರಣ?
ಒಂದಷ್ಟು ದಿನವಾದರೂ ಸಮಾಜಕ್ಕೆ ಅವರ ಕಾಟ ತಪ್ಪುವುದಲ್ಲ!

ಕಾವ್ಯಶ್ರೀ, ಶೋರಾಪುರ
ಹೊಟ್ಟೆಕಿಚ್ಚು ಯಾರಲ್ಲಿ ಹೆಚ್ಚು?
ಮೆಣಸಿನಕಾಯಿ ಬಜ್ಜಿ ತಿನ್ನುವವರಲ್ಲಿ.

ಅಮರಯ್ಯಾ ಪತ್ರಿಮಠ, ಸುರಪುರ
ಭಗವಂತನ ಒಲುಮೆಗೆ ಭಕ್ತಿ ಬೇಕು. ಮಡದಿಯ ಒಲುಮೆಗೆ?
ಸಮ ಪ್ರಮಾಣದಲ್ಲಿ ರಕ್ತಿ, ವಿರಕ್ತಿ, ಯುಕ್ತಿ, ಕುಯುಕ್ತಿ, ಶಕ್ತಿ, ಆಸಕ್ತಿ, ವಿನಂತಿ...

ರತ್ನಜ, ಮೈಸೂರು
ಹೆಣಗಾಡುವುದು ಎಂದರೇನು?
ಹೆಣದಂತೆ ಅಲುಗಲಾಗದ, ಗಾಡ್‌ನಂತೆ ಅದೃಶ್ಯವಾಗುವ ಪರಿಸ್ಥಿತಿಗಳಿಗೆ ತುತ್ತಾಗುವುದು.

ಜಯಶ್ರೀ, ಬೆಂಗಳೂರು
ಕುಡುಕರು ಅವರ ಮನೆಗೆ ಸರಿಯಾಗಿ ಹೋಗುವರಲ್ಲ, ಹೇಗೆ?
ಅವರು ಬಿದ್ದ ಮೋರಿಯಲ್ಲಿ ಹರಿಯುವ ನೀರಿಗೆ ನಶೆ ಇಳಿಸುವ ಗುಣ ಇರುವುದರಿಂದ.

## ಬಹುಮಾನಿತ ಪ್ರಶ್ನೆ

ರಾಜೀವ್ ಎನ್. ಮಾಗಲ್, ಸಕಲೇಶಪುರ
ಹರಿದ ಜೀನ್ಸ್ ಧರಿಸಿದಂತೆಯೇ ಹರಿದ ರೇಷ್ಮೆ ಸೀರೆ, ಪಂಚೆ ಧರಿಸಿದರೆ ಫ್ಯಾಶನ್ ಹೇಗಿರಬಹುದು?
ವೆರಿ ಗುಡ್. ಅಟ್ಟದ ಮೇಲಿನ ಹರಕಲುಗಳಿಗೂ ಆ್ಯಂಟಿಕ್ ವ್ಯಾಲ್ಯೂ ಬಂದುಬಿಡುತ್ತದೆ.

ದಿನೇಶ್, ಗುಡ್ಡದೂರು
ಯಮನು ಪ್ರಶ್ನೆ ಕೇಳಲು ನಿಮ್ಮನ್ನು ನರಕಕ್ಕೆ ಕರೆದರೆ ಹೋಗುತ್ತೀರಾ ರಾಮ್?
ನಿಮಗೂ ಉತ್ತರ ತಿಳಿಯುವ ಕಾತುರವಿರುತ್ತಲ್ಲ! ಬನ್ನಿ, ಒಟ್ಟಿಗೆ ಹೋಗೋಣ.

ಲಕ್ಷ್ಮಣ್ ಗೂರ್ಲಕಟ್ಟೆ, ಮೈಸೂರು
ವಿಷ್ಣು ತನ್ನ ಹತ್ತೂ ಅವತಾರಗಳನ್ನು ಭಾರತದಲ್ಲಿಯೇ ಏಕೆ ಅವತರಿಸಿದ?
ದೇವನು ಅವತರಿಸಲು ಅವಶ್ಯವಾದ ಕಾಲರ್ ಐಡಿ, ಪಾಸ್‌ವರ್ಡ್ ನಮ್ಮವರಿಗೆ ಮಾತ್ರ ಗೊತ್ತಿತ್ತಂತೆ.

ಮಂಜುನಾಥ ಕೆ.ಪಿ. ಕೆ.ಟಿ.ಹಳ್ಳಿ
ಹಸುಗಳು ಹಸಿರನ್ನೇ ಇಷ್ಟಪಡುತ್ತವೆ. ಯಾಕೆ?



ದುರಾಸೆಗೆ ಬಲಿಯಾಗದೆ 'ತೃಣಮಟ್ಟದ' ಆಸೆ ಹೊಂದುವುದು ಅವುಗಳ ಸದ್ಗುಣವಂತೆ.

ಬಿ.ಆರ್. ಉಷಾ, ಕೆನಡಾ
ತಂದೆತಾಯಿ ಇಲ್ಲದ ಮಕ್ಕಳು ಅನಾಥರು. ಮಕ್ಕಳಿಲ್ಲದ ತಂದೆತಾಯಿ?
ಸ್ವಾವಲಂಬನೆಯಲ್ಲಿ ನಿಷ್ಣಾತರು.

ಲ.ಕಿ. ನರಸಿಂಹಾರೆಡ್ಡಿ, ಸೇಡಂ
ಬಹುಮಾನಿತ ಪ್ರಶ್ನೆಗೆ ಸಿಗುವ ಬಹುಮಾನವೇನು ಸರ್?
ಕೆಲವು ಪ್ರಶ್ನಿಗರ ಮೆಚ್ಚುಗೆ, ಕೆಲವರ ಮತ್ಸರ, ಒಂದಿಷ್ಟು ಹಣ.

■ ರಾಮ್